## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 82/2018 ಸಿಡಬ್ಲೂ : 5 ಪಿಡಬ್ಲೂಃ 1

ಪ್ರಮಾಣವಚನ ಬೋಧಿಸಲಾಯಿತು ದಿಃ 06-03-2026

ಹೆಸರು : ಮರೆಪ್ಪ

ತಂದೆ ಹೆಸರು : ಭೀಮಪ್ಪ ನಾಟಿಕರ್

ವಯಸ್ಸು : 65 ವರ್ಷ

ಉದ್ಯೋಗ : ನಿವೃತ್ತ ಅಬಕಾರಿ ನೀರೀಕ್ಷಕ

ವಾಸಸ್ಥಳ : ಕಲಬುರಗಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 02-04-2012 ರಿಂದ 02-09-2015 ರವರೆಗೆ ಸೇಡಂ ವಲಯದ ಅಬಕಾರಿ ನಿರೀಕ್ಷಕ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.15-03-2013 ರಂದು 03-00 ಗಂಟೆ ಸುಮಾರಿಗೆ ಮಲಕಪಲ್ಲಿ ಗ್ರಾಮದಲ್ಲಿ ವೆಕಟಮ್ಮ ಗಂಡ ಮೊಗಲಪ್ಪ ಎಂಬುವವಳು ತನ್ನ ಮನೆಯಲ್ಲಿ ಅಕ್ರಮವಾಗಿ ಕಲಬೆರಕೆ ಸೇಂದಿ ಮತ್ತು ಕಳ್ಳ ಬಡ್ಡಿ ಸರಾಯಿ ಮಾರಾಟ ಮಾರುತ್ತಿದ್ದಾರೆ ಎಂದು ಬಾತಿಮಿ ಬಂದಿತ್ತು. ತಕ್ಷಣ ಸ್ದಳೀಯ ಪಂಚರನ್ನು ಬರ ಮಾಡಿಕೊಂಡು ಬತಮಿ ಬಂದ ವಿಷಯವನ್ನು ತಿಳಿಸಿ ಒಂದು ವೇಳೆ ಅಲ್ಲಿನ ಜನರು ಪಂಚರಾಗಲು ಒಪ್ಪಿ ಕೊಳ್ಳಲಿಲ್ಲ ಎಂದರೆ ತಾವು ಪಂಚರಾಗಿ ಸಹಕರಿಸಲು ಕೋರಿದ ಮೇರೆಗೆ ಅವರು ಪಂಚರಾಗಲು ಒಪ್ಪಿ ಕೊಂಡಿದ್ದು. ನಂತರ ಸರ್ಕಾರಿ ವಾಹನ ಸಂಖ್ಯೆ ಕೆಎ 32 ಜಿ 477 ಮುಖಾಂತರ ಸಿಬ್ಬಂದಿಯೊಂದಿಗೆ ಮತ್ತು ಪಂಚರಿಗೆ ಜೊತೆಯಲ್ಲೆ ಕರೆದುಕೊಂಡು 07-00 ಗಂಟೆಗೆ ಸದರಿ ಸ್ದಳಕ್ಕೆ ಭೇಟಿ ನೀಡಿದೆವು. ಆಗ ನಮ್ಮ ಮತ್ತು ಸಿಬ್ಬಂದಿಯವರಿಗೆ ಗಮನಿಸಿ ಆ ಮನೆಯಿಂದ ಒರ್ವ ಆರೋಪಿತಳು ಮನೆಯಿಂದ ಓಡಿ ಹೋಗಿರುತ್ತಾಳೆ. ಅವಳಿಗೆ ಹಿಡಿಯಲು ಪರಯತ್ನಿಸಿದರು ಸಹ ಸಿಕ್ಕಿರುವುದಿಲ್ಲ. ತದ ನಂತರ ಸದರಿ ಮನೆಯಲ್ಲಿ ತಪಾಸಣೆ ಮಾಡಲು ಸಮುಚಿತಾ ಶೋಧನಾ ಪತ್ರವನ್ನು ತಯಾರಿಸಿ ಮನೆಯನ್ನು ಶೋಧನೆ ಮಾಡಲಾಗಿ ಸದರಿ ಮನೆಯಲ್ಲಿ ನಾಲ್ಕು ಕೊಡಗಳು ಇದ್ದವು. ಅದನ್ನು ತೆರೆದು ನೋಡಲಾಗಿ ಪ್ರತಿ ಕೊಡದಲ್ಲಿ 10 ಲೀ ಯಂತೆ ಒಟ್ಟು 40 ಲೀ ಕಲಬೆರಕೆ ಸೇಂದಿಯು ದೊರೆಯಿತು. ಅದರಲ್ಲಿ 180 ಎಂ ಎಲ್ ನ 1 ಬಾಟಲಿಯಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು ಪ್ರತ್ಯೇಕವಾಗಿ ಜಪ್ತಿ ಮಾಡಲಾಯಿತು. ಹಾಗೇಯೇ

ಮನೆಯಲ್ಲಿರುವ ಮಂಚ ಕೆಳಗಡೆ 5 ಲೀ ಕಳ್ಳ ಬಡ್ಡಿ ಸರಾಯಿ ದೊರೆತಿದ್ದು. ಅದರಲ್ಲಿ 180 ಎಂ ಎಲ್ ನ 1 ಬಾಟಲಿಯಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು ಪ್ರತ್ಯೇಕವಾಗಿ ಜಪ್ತಿ ಮಾಡಲಾಯಿತು. ನಂತರ ಅಲ್ಲಿರುವ ಜನರಿಗೆ ಓಡಿ ಹೋದ ಮಹಿಳೆಯ ಬಗ್ಗೆ ವಿಚಾರಿಸಲಾಗಿ ಅವಳ ಹೆಸರು ವೆಂಕಟಮ್ಮ ಗಂಡ ಮೊಗಲಪ್ಪ ಎಂದು ಗೊತ್ತಾಗುತ್ತದೆ. ಸದರಿ ಕಲಬೆರಕೆ ಮತ್ತು ಕಳ್ಳ ಬಡ್ಡಿ ಸರಾಯಿಯನ್ನು ನಮ್ಮ ವಶಕ್ಕೆ ಪಡೆದುಕೊಂಡು ರಾತ್ರಿ 07-00 ರಿಂದ 08-00 ಗಂಟೆಯ ವರೆಗೆ ವಿದ್ಯುತ್ ದೀಪದ ಕೆಳಗೆ ಪಂಚನಾಮೆಯನ್ನು ಬರೆದು ಮುಗಿಸಲಾಯಿತು. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 1 ಹಾಗೂ ಅದರಲ್ಲಿರುವ ಸಾ ಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು, ಅದೇ ರೀತಿ ಶೋದನಾ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 2 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಮಾದರಿ ಮುದ್ರೆ ಯ ನಕಲನ್ನು ನೋಡಿ ಗುರುತಿಸಿದ್ದು ನಿ ಪಿ 3 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ನಂತರ ಕಛೇರಿಗೆ ಬಂದು ಸದರಿ ಆರೋಪಿಯ ವಿರುದ್ದ ಪ್ರ ವ ವರದಿಯನ್ನು ತಯಾರಿಸಿ ಮಾನ್ಯ ಅಬಕಾರಿ ಉಪಆಯುಕ್ತರಿಗೆ ಮತ್ತು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ರೀತಿ ಪ್ರ ವ ವರದಿಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿ ಪಿ 4 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 4 (ಎ) ಎಂದು ಗುರುತಿಸಲಾಯಿತು. ನಂತರ 05-08-2013 ರಂದು 180 ಎಂ ಎಲ್ ನ ಕಲಬೆರಕೆ ಸೇಂದಿ ಮತ್ತು 180 ಎಂ ಎಲ್ ನ ಕಳ್ಳ ಬಡ್ಡಿ ಸಾಯಿಯ ಬಾಟಲಿಗಳನ್ನು ಚಾ ಸಾ 3 ರವರ ಮುಖಾಂತರ ರಾಸಾಯನಿಕ ವಿಶ್ಲೇಷಣೆಗಾಗಿ ಎಫ್ ಎಸ್ ಎಲ್ ಗೆ ಕಳುಹಿಸಲಾಯಿತು. ಸದರಿ ಪತ್ರವನ್ನು ನೋಡಿ ಗುರುತಿಸಿದ್ದುಅ ದನ್ನು ನಿ ಪಿ 5 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು. ಅದೇ ರೀತಿ 25-09-2013 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಸ್ವೀಕರಿಸಿರುತ್ತೇನೇ ಸಾಕ್ಷಿಯು ದಸರಿ ವರದಿಯನ್ನು ನೋಡಿ ಗುರುತಿಸಿದ್ದುಅದನ್ನು ನಿ ಪಿ 6 ಎಂದು ಹಾಗೂ ಅದರಲ್ಲರುವ ಸಾಕ್ಷಿಯ ಸಹಿಯನ್ನು ನಿ ಪಿ 6(ಎ)ಎಂದು ಗುರುತಿಸಲಾಯಿತು. ಅದೇ ರೀತಿ ಎರಡು 180 ಎಂ ಎಲ್ ನ ಬಾಟಲಿಗಳನ್ನು ನೋಡಿ ಗರುತಿಸಿದ್ದು ಅದನ್ನು ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟಿ ಸವಾಲು ಃ ಆರೋಪಿ ಪರ ಶ್ರೀ ಎ ಎಂ ವಕೀಲರಿಂದಃ**

ದಿ.15-03-2013 ರಂದು 03-00 ಗಂಟೆ ಸುಮಾರಿಗೆ ಮಲಕಪಲ್ಲಿ ಗ್ರಾಮದಲ್ಲಿ ವೆಕಟಮ್ಮ ಗಂಡ ಮೊಗಲಪ್ಪ ಎಂಬುವವಳು ತನ್ನ ಮನೆಯಲ್ಲಿ ಅಕ್ರಮವಾಗಿ ಕಲಬೆರಕೆ ಸೇಂದಿ ಮತ್ತು

ಕಳ್ಳ ಬಡ್ಡಿ ಸರಾಯಿ ಮಾರಾಟ ಮಾರುತ್ತಿದ್ದಾರೆ ಎಂದು ಬಾತಿಮಿ ಬಂದಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ತಕ್ಷಣ ಸ್ಥಳೀಯ ಪಂಚರನ್ನು ಬರ ಮಾಡಿಕೊಂಡು ಬತಮಿ ಬಂದ ವಿಷಯವನ್ನು ತಿಳಿಸಿ ಒಂದು ವೇಳೆ ಅಲ್ಲಿನ ಜನರು ಪಂಚರಾಗಲು ಒಪ್ಪಿ ಕೊಳ್ಳಲಿಲ್ಲ ಎಂದರೆ ತಾವು ಪಂಚರಾಗಿ ಸಹಕರಿಸಲು ಕೋರಿದ ಮೇರೆಗೆ ಅವರು ಪಂಚರಾಗಲು ಒಪ್ಪಿ ಕೊಂಡಿದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಸರ್ಕಾರಿ ವಾಹನ ಸಂಖ್ಯೆ ಕೆಎ 32 ಜಿ 477 ಮುಖಾಂತರ ಸಿಬ್ಬಂದಿಯೊಂದಿಗೆ ಮತ್ತು ಪಂಚರಿಗೆ ಜೊತೆಯಲ್ಲೆ ಕರೆದುಕೊಂಡು 07-00 ಗಂಟೆಗೆ ಸದರಿ ಸ್ಥಳಕ್ಕೆ ಭೇಟಿ ನೀಡಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಮ್ಮ ಮತ್ತು ಸಿಬ್ಬಂದಿಯವರಿಗೆ ಗಮನಿಸಿ ಆ ಮನೆಯಿಂದ ಒರ್ವ ಆರೋಪಿತಳು ಮನೆಯಿಂದ ಓಡಿ ಹೋಗಿರುತ್ತಾಳೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅವಳಿಗೆ ಹಿಡಿಯಲು ಪರಯತ್ನಿಸಿದರು ಸಹ ಸಿಕ್ಕಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ತದ ನಂತರ ಸದರಿ ಮನೆಯಲ್ಲಿ ತಪಾಸಣೆ ಮಾಡಲು ಸಮುಚಿತಾ ಶೋಧನಾ ಪತ್ರವನ್ನು ತಯಾರಿಸಿ ಮನೆಯನ್ನು ಶೋಧನೆ ಮಾಡಲಾಗಿ ಸದರಿ ಮನೆಯಲ್ಲಿ ನಾಲ್ಕು ಕೊಡಗಳು ಇದ್ದವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದನ್ನು ತೆರೆದು ನೋಡಲಾಗಿ ಪ್ರತಿ ಕೊಡದಲ್ಲಿ 10 ಲೀ ಯಂತೆ ಒಟ್ಟು 40 ಲೀ ಕಲಬೆರಕೆ ಸೇಂದಿಯು ದೋರೆಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದರಲ್ಲಿ 180 ಎಂ ಎಲ್ ನ 1 ಬಾಟಲಿಯಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು ಪ್ರತ್ಯೆಕವಾಗಿ ಜಪ್ತಿ ಮಾಡಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಹಾಗೇಯೇ ಮನೆಯಲ್ಲಿರುವ ಮಂಚ ಕೆಳಗಡೆ 5 ಲೀ ಕಳ್ಳ ಬಡ್ಡಿ ಸರಾಯಿ ದೊರೆತಿದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದರಲ್ಲಿ 180 ಎಂ ಎಲ್ ನ 1 ಬಾಟಲಿಯಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು ಪ್ರತ್ಯೆಕವಾಗಿ ಜಪ್ತಿ ಮಾಡಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಅಲ್ಲಿರುವ ಜನರಿಗೆ ಓಡಿ ಹೋದ ಮಹಿಳೆಯ ಬಗ್ಗೆ ವಿಚಾರಿಸಲಾಗಿ ಅವಳ ಹೆಸರು ವೆಂಕಟಮ್ಮ ಗಂಡ ಮೊಗಲಪ್ಪ ಎಂದು ಗೊತ್ತಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಕಲಬೆರಕೆ ಮತ್ತು ಕಳ್ಳ ಬಡ್ಡಿ ಸರಾಯಿಯನ್ನು ನಮ್ಮ ವಶಕ್ಕೆ ಪಡೆದುಕೊಂಡು ರಾತ್ರಿ 07-00 ರಿಂದ 08-00 ಗಂಟೆಯ ವರೆಗೆ ವಿದ್ಯುತ್ ದೀಪದ ಕೆಳಗೆ ಪಂಚನಾಮೆಯನ್ನು ಬರೆದು ಮುಗಿಸಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ 05-08-2013 ರಂದು 180 ಎಂ ಎಲ್ ನ ಕಲಬೆರಕೆ ಸೇಂದಿ ಮತ್ತು 180 ಎಂ ಎಲ್ ನ ಕಳ್ಳ ಬಡ್ಡಿ ಸಾಯಿಯ ಬಾಟಲಿಗಳನ್ನು ಚಾ ಸಾ 3 ರವರ ಮುಖಾಂತರ ರಾಸಾಯನಿಕ ವಿಶ್ಲೇಷಣೆಗಾಗಿ ಎಫ್ ಎಸ್ ಎಲ್ ಗೆ ಕಳುಹಿಸಲಾಯಿತು ಎಂದು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಮ್ಮ ಇಲಾಖೆಯ ಅಂಕಿ ಸಂಖ್ಯೆ ಗೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿತರು ಯಾವುದೇ ಅಪರಾದ ಮಾಡದೇ ಇದ್ದರೂ ಸಹ ಸುಳ್ಳು ಪ್ರಕರಣವನ್ನು ದಾಖಲಿಸಿಕೊಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

(ಮರುವಿಚಾರಣೆ ಇಲ್ಲ)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**